ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2018-19ನೇ ಸಾಲಿನಲ್ಲಿ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ನಿರ್ವಹಣೆ ಕಾರ್ಯಕ್ರಮದಡಿ ಕೇಂದ್ರ ಹಾಗೂ ರಾಜ್ಯ ಸಹಾಯಧನ ವರ್ಗಾಯಿಸುವ ಕುರಿತು.

ಓದಲಾಗಿದೆ :
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ 553/16/2017-ಬಯೋಗ್ಯಾಸ್, ದಿನಾಂಕ 30.05.2018.
2. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 18 ಜೈಅಯೋ 2018, ದಿನಾಂಕ 08.06.2018.
3. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 18 ಜೈಅಯೋ 2018, ದಿನಾಂಕ 25.02.2019.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಜಿಪಂಚಿ/ಅಭಿ/ಯೋಅ/1/2018-19, ದಿನಾಂಕ 23.03.2019.

## ಪ್ರಸ್ತಾವನೆ :

ಮೇಲೆ (1) ಮತ್ತು (2)ರಲ್ಲಿ ಓದಲಾದಂತೆ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವ ದೆಹಲಿಯು **2018-19ನೇ** ಸಾಲಿಗೆ ಸಂಬಂಧಿಸಿದಂತೆ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ನಿರ್ವಹಣೆ(NNBOMP) ಕಾರ್ಯಕ್ರಮದಡಿ ರಾಜ್ಯಕ್ಕೆ ಹಂಚಿಕೆ ಮಾಡಿದ **8900** ಜೈವಾನಿಲ ಸ್ಥಾವರಗಳ ಭೌತಿಕ ಗುರಿಯನ್ನು ಜಿಲ್ಲಾ ಪಂಚಾಯತ್‌ಗಳಿಗೆ ಹಂಚಿಕೆ ಮಾಡಿದೆ.

ಮೇಲೆ (3)ರಲ್ಲಿ ಓದಲಾದಂತೆ 2018-19ನೇ ಸಾಲಿಗೆ ತುಮಕೂರು ಜಿಲ್ಲಾ ಪಂಚಾಯಿತಿಗೆ ಕಾರ್ಯಕ್ರಮದಡಿ ನಿಗದಿಪಡಿಸಿದ ಒಟ್ಟಾರೆ ಭೌತಿಕ ಗುರಿ 300ರ ಪೈಕಿ 70 ಸ್ಥಾವರಗಳ ಭೌತಿಕ ಗುರಿಯನ್ನು ಹಿಂಪಡೆದು ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ಗೆ ಹೆಚ್ಚುವರಿಯಾಗಿ ಹಂಚಿಕೆ ಮಾಡಿದೆ.

ಇದರನ್ವಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ರವರು NNBOMP ಕಾರ್ಯಕ್ರಮದಡಿ ನಿಗದಿಪಡಿಸಿದ ಒಟ್ಟಾರೆ ಭೌತಿಕ ಗುರಿಗೆ ಅನುದಾನವನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ (4)ರ ಪತ್ರದಲ್ಲಿ ಕೋರಿರುವ ಪ್ರಸ್ತಾವನೆಯನ್ನು ಪರಿಗಣಿಸಿ, ಕಾರ್ಯಕ್ರಮದಡಿ ಪ್ರಗತಿ ಸಾಧಿಸದೇ ಇರುವ ಹಾಗೂ ಅನುದಾನದ ಲಭ್ಯತೆಯನ್ನು ಹೊಂದಿರುವ ಬಾಗಲಕೋಟೆ ಜಿಲ್ಲಾ ಪಂಚಾಯತ್‌ಯಿಂದ ಕೇಂದ್ರ ಸಹಾಯಧನ **ರೂ.15.65ಲಕ್ಷ**ಗಳನ್ನು ಹಿಂಪಡೆದು ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ಗೆ PFMS ಮೂಲಕ ವರ್ಗಾಯಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/60/ಜೈಅಯೋ/2018 ಬೆಂಗಳೂರು, ದಿನಾಂಕ 28.03.2019.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ನವ ರಾಷ್ಟ್ರೀಯ ಜೈವಾನಿಲ ಮತ್ತು ಸಾವಯವ ಗೊಬ್ಬರ ನಿರ್ವಹಣೆ (NNBOMP) ಕಾರ್ಯಕ್ರಮದಡಿ 2018-19ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲಾ ಪಂಚಾಯತಿಯಲ್ಲಿ ಕಾರ್ಯಕ್ರಮದಡಿ ಬಿಡುಗಡೆಯಾದ ಕೇಂದ್ರ ಸಹಾಯಧನವನ್ನು ಉದ್ದೇಶಿತ ಯೋಜನೆಗೆ ವಿನಿಯೋಗಿಸದೇ ಉಳಿಕೆ ಇರಿಸಿಕೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಪ್ರಸಕ್ತ ಆರ್ಥಿಕ ಸಾಲು ಕೊನೆಗೊಳ್ಳುತ್ತಿರುವ ನಿಟ್ಟಿನಲ್ಲಿ ಕಾರ್ಯಕ್ರಮದ ಹಿತದೃಷ್ಟಿಯಿಂದ ಕೇಂದ್ರ ಸಹಾಯಧನ **ರೂ.15.65ಲಕ್ಷ (ಹದಿನೈದು ಲಕ್ಷದ ಅರವತ್ತೈದು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ ರವರು ಕೂಡಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ರವರಿಗೆ PFMS ಮೂಲಕ ವರ್ಗಾಯಿಸಲು ಆದೇಶಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ರವರ NNBOMP ಕಾರ್ಯಕ್ರಮದ ಖಾತೆಯ ವಿವರ ಕೆಳಕಂಡಂತಿದೆ.

| Sl. No. | District | Name of the A/c holder | Name of the Bank | IFSC Code | Account No. | Amount (Rs. In Lakh) |
|---|---|---|---|---|---|---|
| 1 | Chikkamagalur | Chief Executive Officer | Indian Overseas Bank | IOBA0000838 | 083801000008844 | 15.65 |

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡತಕ್ಕದಲ್ಲ.

ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸುವುದು ಹಾಗೂ **PFMS** ತಂತ್ರಾಂಶದಲ್ಲೇ ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು. ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-60-196-6-01**ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು.

ಪ್ರಸಕ್ತ ಆರ್ಥಿಕ ಸಾಲು ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಅನುಷ್ಠಾನದ ಹಿತದೃಷ್ಟಿಯಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ ರವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ರವರಿಗೆ ಅನುದಾನವನ್ನು ವರ್ಗಾಯಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ: ಎನ್ ಕೃಷ್ಣಪ್ಪ ಕೋಡಿಹಳ್ಳಿ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ ಮತ್ತು ಚಿಕ್ಕಮಗಳೂರು
3. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು(ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.